# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ


ಯಕ್ಷಗಾನ ಪ್ರಸಂಗ

# ಶ್ರೀ ಬಪ್ಪನಾಡು ಕ್ಷೇತ್ರ ಮಹಾತ್ಮೆ


ಕವಿ

## ಅಗರಿ ಶ್ರೀನಿವಾಸ ಭಾಗವತರು



ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ಮೇ ೩೦, ೨೦೨೦

ಯಕ್ಷವಾಹಿನಿ®

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com

## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಟಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಟಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ಪಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ


## ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯ. ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು. ಅದರ ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ. ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ. ವರ್ಷವರ್ಷವೂ ನೂರಾರು ಹೊಸಕೃತಿಗಳ ಸೇರ್ಪಡೆಯಾಗುತ್ತಲೇ ಇವೆ. ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ. ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ. ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ. ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು ತೊಡಕಿನದು. ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳು. ಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ. ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ ಅಧ್ಯಯನದ ಆವಶ್ಯಕತೆಯಿದೆ. ಆದರೆ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆ. ಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ. ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ  ಹಾನಿಯಾಗುತ್ತಿದೆ.

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆ. ಅದೇ ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣ. ಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ ಇದು. ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ ಮಾಡುವವರಿಗೆ ಅತ್ಯಂತ ಅನುಕೂಲ. ಅಧ್ಯಯನಕ್ಕೂ, ಸಂಗ್ರಹಕ್ಕೂ ಅನುಕೂಲ ಹಾಗೂ  ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ.

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದು. ಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ. ಇದಕ್ಕೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ. ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



**ಪ್ರೊ. ಎಂ. ಎ. ಹೆಗಡೆ**
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



**ಎಸ್. ಎಚ್. ಶಿವರುದ್ರಪ್ಪ**
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ದರ್ಶನವಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**

ಪೌರಾಣಿಕ

**ಆಧಾರ ಗ್ರಂಥ:**

ಸ್ಥಳಪುರಾಣ

**ಭಾಷೆ:**

ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**

ಪದವೀಧರ ಸಮಿತಿ, ಮುಂಬೈ ಪ್ರಕಟಿತ ಅಗರಿಯವರ ಯಕ್ಷಗಾನ ಪ್ರಸಂಗಗಳು ಸಂಪುಟ

**ಹಕ್ಕುಸ್ವಾಮ್ಯ ವಿವರ:**

ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**

೧೫೭

**ಪಾತ್ರಗಳು:**

ದೇವೇಂದ್ರ, ದಾರಿಗಾಸುರ, ಶ್ರೀಹರಿ, ಬಪ್ಪ ಬ್ಯಾರಿ, ಶ್ರೀದೇವಿ, ಗುಳಿಗ, ಸಪ್ತದುರ್ಗೆಯರು, ಭಿಕ್ಷುಕಿ, ಭಗವತಿ, ದುಗ್ಗಣ್ಣ ಇತ್ಯಾದಿ

**ಕಥಾ ಸಾರಾಂಶ:**

ಶೋಣಿತಪುರದಲ್ಲಿ ದುರುಳ ದಾನವ ದಾರಿಗಾಸುರ ಮಾನವರನ್ನು ಸದೆ ಬಡಿದು, ನಾಕವನ್ನು ಬಯಸುತ್ತಾನೆ. ಬ್ರಹ್ಮನಲ್ಲಿ ತಪವನ್ನು ಆಚರಿಸಿ ವರ ಪಡೆದ ನಂತರ ದೇವೇಂದ್ರನನ್ನು ಸೋಲಿಸಿ ಸ್ವರ್ಗವನ್ನು ಪಡೆಯುತ್ತಾನೆ. ದೇವತೆಗಳು ಶ್ರೀಹರಿಯ ಮೊರೆಹೊಕ್ಕಾಗ ಮಹಾವಿಷ್ಣು ತಾನು ದಾನವನನ್ನು ಕೊಲ್ಲುವುದಾಗಿ ಭರವಸೆ ನೀಡುತ್ತಾನೆ. ದಾರಿಗಾಸುರನಿಂದ ಶ್ರೀಹರಿಯು ಯುದ್ಧದಲ್ಲಿ ಸೋತಾಗ ದುರ್ಗಾಪರಮೇಶ್ವರೀಯು ಸಪ್ತಶಕ್ತಿ ದುರ್ಗೆಯ ರೂಪದಲ್ಲಿ ಬಂದು ಖಳನನ್ನು ಕೊಲ್ಲುತ್ತೇನೆ ಎಂಬ ಭರವಸೆಯನ್ನು ನೀಡುತ್ತಾಳೆ ಹಾಗೂ ನೀಡಿದ ಭರವಸೆಯಂತೆ ಅವಳು ಶೋಣಿತಪುರಕ್ಕೆ ಬರುತ್ತಾಳೆ. ದೇವಿಯೊಂದಿಗೆ ನಡೆದ ಯುದ್ಧದಲ್ಲಿ ದಾರಿಗಾಸುರ ಪಲಾಯನಗೈಯ್ಯುತ್ತಾನೆ. ಆಗ ಶ್ರೀದೇವಿಯು ಅವನನ್ನು ಹುಡುಕಿ ಶಿವ ಧ್ಯಾನದಲ್ಲಿರುವಾಗ ಅವನನ್ನು ಕೊಲ್ಲುತ್ತಾಳೆ. ಭಕ್ತರ ಸಲುಹುವುದಕ್ಕೆ ಮುಲ್ಕಿಯಲ್ಲಿ ನೆಲೆಸುತ್ತಾಳೆ. ಕಾಲಾಂತರದಲ್ಲಿ ಬಪ್ಪ ಬ್ಯಾರಿ ಅನ್ನುವ ಮುಸ್ಲಿಂ ವ್ಯಾಪಾರಿ ಹಡಗಿನಲ್ಲಿ ಸಾಗುತ್ತಿರುವಾಗ, ಹಡಗು ಮಾರ್ಗ ಮಧ್ಯದಲ್ಲಿ ನಿಲ್ಲುತ್ತದೆ. ಅದರ ಹಡಗಿನ ತಳಭಾಗವನ್ನು ನೋಡಿದಾಗ ನೀರು ರಕ್ತದ ಬಣ್ಣದಲ್ಲಿರುತ್ತದೆ. ಭಯಭೀತನಾದ ವ್ಯಾಪಾರಿ ದೇವಿಯನ್ನು ಪ್ರಾರ್ಥಿಸಿದಾಗ ದೇವಿಯು ಪ್ರತ್ಯಕ್ಷವಾಗಿ ತನಗೆ ದೇವಾಲಯ ಕಟ್ಟಿಸುವಂತೆ ಪ್ರೇರೇಪಿಸುತ್ತಾಳೆ. ಮುಂದೆ ತನ್ನನ್ನು ನಂಬಿ ಬರುವ ಭಕ್ತರನ್ನು ಪೊರೆಯುವ ಬಪ್ಪನಾಡು ಕ್ಷೇತ್ರದ ಮಹಾಮಾತೆಯ ಪುಣ್ಯಕಥನವಿದು.

**ಕವಿ ಪರಿಚಯ: (ಆಧಾರ: ಕರ್ನಾಟಕ ಕವಿ ಚರಿತ್ರೆ – ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)**

ಅಗರಿ ಶ್ರೀನಿವಾಸ ಭಾಗವತರು ಮೂಲತಃ ಸುರತ್ಕಲ್ ಸಮೀಪದ ಹೊಸಬೆಟ್ಟಿನವರು. ಎಡಪದವು ಹತ್ತಿರದ ಅಗರಿಯಲ್ಲಿ ನೆಲೆನಿಂತವರು. ತಂದೆ ತಿಮ್ಮಪ್ಪಯ್ಯ, ತಾಯಿ ರಾಧಮ್ಮ. ದಿ ಅಗರಿ ಶ್ರೀನಿವಾಸ ಭಾಗವತರು ೧೯೨೭ರ ಪೂರ್ವದಲ್ಲಿ ನಾಟಕ ರಂಗದಲ್ಲಿ ತೊಡಗಿಸಿಕೊಂಡವರಾಗಿದ್ದರು. ಸಾಹಿತ್ಯ, ಸಂಗೀತಗಳ ಮೇಲಿದ್ದ ಅಭಿಮಾನದಿಂದ ನಾಟಕ ರಂಗಗಳಲ್ಲಿ ವ್ಯವಸಾಯ ಮಾಡುತ್ತಿದ್ದರು. ದಿವಂಗತ ಪುತ್ತಿಗೆ ರಾಮಕೃಷ್ಣ ಜೋಯಿಸ ಭಾಗವತರ ಮೈತ್ರಿ ಅಗರಿ ಭಾಗವತರನ್ನು ಯಕ್ಷಗಾನ ಕಲೆಯತ್ತ ಸೆಳೆಯಿತು. ಮಂಗಳೂರಿನ ಶಿಕ್ಷಕ ತರಬೇತಿ ಶಾಲೆ ಹಾಗೂ ಕೆನರಾ ಹೈಸ್ಕೂಲಿನಲ್ಲಿ ವಾರಕ್ಕೊಮ್ಮೆ ನಡೆಯುತ್ತಿದ್ದ ತಾಳಮದ್ದಲೆ ಕೂಟಗಳಲ್ಲಿ ಭಾಗವಹಿಸುತ್ತಿದ್ದ ಅಜ್ಜ ಬಲಿಪರ ಭಾಗವತಿಕೆಯನ್ನು ಕೇಳಿ

ಯಕ್ಷಗಾನ ಹಾಡುಗಾರಿಕೆಯ ವೈಶಿಷ್ಟ್ಯವೇನೆಂಬುದನ್ನು ಮನನ ಮಾಡಿಕೊಂಡರು. ಧರ್ಮಸ್ಥಳ, ಕಟೀಲು, ಕೂಡ್ಲು, ಸುರತ್ಕಲ್, ಸುಬ್ರಮಣ್ಯ ಮುಂತಾದ ಮೇಳಗಳಲ್ಲಿ ಭಾಗವತರಾಗಿ ತಿರುಗಾಟ ನಡೆಸಿದ್ದಾರೆ. ಯಕ್ಷಬ್ರಹ್ಮ ಎಂಬ ಅಭಿನಂದನ ಗ್ರಂಥ ಇವರಿಗೆ ಸಮರ್ಪಣೆಯಾಗಿದೆ. ಇವರು ೨೮ ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಇವರ ಶ್ರೀ ದೇವಿ ಮಹಾತ್ಮೆ ಒಂದು ಲಕ್ಷಕ್ಕೂ ಅಧಿಕ ಭಾರಿ ಪ್ರದರ್ಶನಗೊಂಡಿದ್ದು ಯಕ್ಷಗಾನದ ಇತಿಹಾಸದಲ್ಲಿ ಒಂದು ದಾಖಲೆಯಾಗಿದೆ.

ಇವರು ಬರೆದ ಪ್ರಸಂಗಗಳು: ಶ್ರೀದೇವೀ ಮಹಾತ್ಮೆ, ಬ್ರಹ್ಮಕಪಾಲ, ಶಿವಲೀಲಾರ್ಪಣ, ಅಂಧಕಾಸುರ ವಧೆ, ಪ್ರಭಾವತೀ ಪರಿಣಯ, ಧನಗುಪ್ತ – ಮಹಾಬಲ, ಭಗವಾನ್ ಏಸುಕ್ರಿಸ್ತ, ಮಹಾದೇವೀಲಲಿತೋಪಾಖ್ಯಾನ, ನಾರಾಯಣ ಗುರು ಮಹಾತ್ಮೆ, ಬಪ್ಪನಾಡು ಕ್ಷೇತ್ರ ಮಹಾತ್ಮೆ, ವೆಂಕಟೇಶ ಮಹಾತ್ಮೆ, ಭರತೇಶ ವೈಭವ, ಶ್ರೀದೇವಿಭ್ರಮರಾಂಬಿಕಾ ವಿಲಾಸ, ಭಸ್ಮಾಸುರ ಮೋಹಿನಿ, ಸುಂದೋಪಸುಂದರ ಕಾಳಗ, ಸಿರಿ ಮಹಾತ್ಮೆ, ಭಸ್ಮರುದ್ರಾಕ್ಷಿ ಮಹಾತ್ಮೆ, ಭಗವಾನ್ ಬುದ್ಧ, ಅಭಯರಾಣಿ ಅಬ್ಬಕ್ಕ, ವಿಶ್ವಾಮಿತ್ರ ಮೇನಕೆ, ಶುಕ್ರಪ್ರತಾಪ, ಜಗದ್ಗುರು ಶಂಕರಾಚಾರ್ಯ, ತಾರಾ ಶಶಾಂಕ, ಕಣ್ವಪುರ ಮಹಾತ್ಮೆ, ಹೊಂಬುಚ್ಚ ಕ್ಷೇತ್ರ ಮಹಾತ್ಮೆ, ಆಟದೊಳಗಿನ ಆಟ, ತುಳಸೀ ಜಲಂಧರ, ನರಕಾಸುರ ವಧೆ.

**ಟಿಪ್ಪಣಿ:**

ಬಳಕೆಯಲ್ಲಿರುವ ಪ್ರಸಂಗ. ಬಪ್ಪನಾಡು ಇತರ ಮೇಳಗಳು ಇದನ್ನು ಹೆಚ್ಚಾಗಿ ಪ್ರದರ್ಶವನ್ನು ಮಾಡುತ್ತಾರೆ.

# ಪ್ರಸಂಗ ಸಾಹಿತ್ಯ

**ಭೈರವಿ - ಝಂಪೆ**
ಪಾಕಶಾಸನನಿರಲು | ನಾಕದಲಿ ನೆರಹಿ ಸುರ |
ನೀಕವನು ಹರುಷದೊಳ | ನೇಕ ಸಂಭ್ರುಮದಿ ||1||

ಸುಮನಸರೊಳೆಂದನಾ | ಕಮಲನಾಭನ ದಯದಿ |
ಅಮಿತ ಸಂಪದವಿನಿತು | ನಮಗೆ ನೆಲೆಯಾಯ್ತು ||2||

ಆದರಾ ದಾನವರು | ಭೇದ ಬುದ್ಧಿಯೊಳೆಮ್ಮ|
ಬಾಧಿಸುವರಡಿಗಡಿಗೆ | ಹಾದಿಯೇನಿದಕೆ ||3|| 3 ||

**ಭೈರವಿ - ಏಕ**
ಪುರುಹೂತನೆ ನೀ ಕೇಳು | ಸುರ |
ಪುರವ ಬಯಸಿ ಗರ್ವದೊಳು ||
ದುರುಳರು ಸಮರಕೆ ಬರಲು | ನಾ |
ತರಿದಿಕ್ಕುವೆ ಶೌರ್ಯದೊಳು ||1||

ವಿಧಿಯಲಿ ಪಡೆದು ವರವನು | ಕದ |
ನದಿ ಗೆಲುವರು ಹೊರತಿನ್ನು ||
ತ್ರಿದಶರ ಜೈಸುವ ಶೌರ್ಯ | ಇ |
ರ್ಪುದೆ ಖಳರಿಗೆ ಸುರರೆರೆಯ ||2||

ಲಕ್ಷ್ಮೀಶನ ಕೃಪೆಯಿರಲು | ನಾವ್ |
ಲೆಕ್ಕಿಪರಲ್ಲ ಧುರದೊಳು ||
ಸೊಕ್ಕಿಹ ಖಳರೈತರಲು | ತರಿ |
ದಿಕ್ಕುವೆವೈ ಸಮರದೊಳು ||3|| 6 ||

**ವಾರ್ಧಕ (ಅರ್ಧ)**
ಸುರರೆಂದ ನುಡಿ ಕೇಳಿ ಹರುಷ ತಳೆದಾ ಮಘವ |
ಹರಿಯ ಕೃಪೆಯಿರಲು ದೈತ್ಯರ ಭೀತಿ ನಮಗಿಲ್ಲ |
ಮರೆಯದಿರಿ ಮನದಿ ಶ್ರೀವರನ ಧ್ಯಾನವ ಬಿಡದೆ ಸುರಪುರದೊಳಿಹುದೆನ್ನುತ ||1|| 7 ||

**ಸೌರಾಷ್ಟ್ರ - ತ್ರಿವುಡೆ**
ಶೋಣಿತಾಪುರವಾಳುತಿದ್ದನು |
ದಾನವಾಧಿಪ ದಾರಿಗಾಸುರ |
ಮಾನವರ ಸದೆಬಡಿದು ದೈತ್ಯ | ಶ್ರೇಣಿ ಸಹಿತ ||1||

ವರಿಸಿಕೊಂಡಿರೆ ಷೋಡಶಾಂಗನೆ |
ಯರನು ನಾಕವ ಬಯಸುತೊಂದಿನ |
ಮೆರೆವ ದೈತ್ಯರನೀಕ್ಷಿಸುತ ಖಳ | ನೊರೆದನಾಗ ||2||

ಕೇಳಿದಿರೆ ನೀವೆಲ್ಲ ತ್ರಿಜಗದಿ |
ಮೇಲೆನಿಪ ನಾಕವನು ಸುಮನಸ |
ರಾಳುವುದು ತರವಲ್ಲವಿದು ಕ | ಟ್ಟಾಳುತನಕೆ ||3||

ಕುಂದೆಮಗೆ ಸಮರದಲಿ ಸುಮನಸ |
ರಂದಗೆಡಿಸುವ ವರವನಾ ವಿಧಿ |
ಯಿಂದ ಪಡೆಯಲು ತಪಕೆ ತೆರಳುವೆ | ನಿಂದು ವನಕೆ ||4|| 11 ||

**ಕಂದ ಪದ್ಯ**

ನುಡಿದಾ ಖಳನೀ ತೆರದಿಂ |
ಅಡವಿಗೆ ನಡೆ ತಂದು ಘೋರ ತಪದಿಂದಿರಲುಂ ||
ನಡೆತಂದಾ ಕಮಲಜನೊಲಿ |
ದೊಡನೆಂದಂ ಬೇಡು ಮನದಿರವ ನೀನೆನಲುಂ ||1|| 12 ||

**ಕಾಂಭೋದಿ - ಝಂಪೆ**

ಶಾರದಾಂಬಾರಮಣ ಬೀರಿದೆಯ ತವ ಕರುಣ |
ತೋರೆ ಕರುಣವ ಧನ್ಯನಾದೆ ||
ಬೇರೆ ಮತವಿಲ್ಲ ತ್ರಿಜಗದ ಜೀವರಲಿ ಸಹಿತ |
ಮೂರು ಮೂರ್ತಿಗಳಿಂದಲೆನಗೆ ||1||

ಮರಣವಿಲ್ಲೆಂದೆಂಬ ವರವಿತ್ತು ಸಲಹೆನ್ನ |
ಶರಣನೆನ್ನುವ ಪ್ರೇಮವಿರಲು ||
ಕರುಣದಿಂದೆನಲವಗೆ ಸರಸಿಜಾಸನನಂದು |
ಪರಸುತಂತರ್ಧಾನ ತಳೆದ ||2||

ವಿಧಿಯ ವರವನು ಪಡೆದು ಮದವ ತಳೆದಾ ದುರುಳ |
ತ್ರಿದಶರನು ಗೆಲುವೆನೆಂದೆನುತ ||
ಕದನಕೈತಂದನವ ಮದಮುಖರ ನೆರಹಿ ಮು |
ತ್ತಿದ ನಾಕವನು ಶೌರ್ಯದಿಂದ ||3|| 15 ||

**ಕಂದ ಪದ್ಯ**

ದೈತ್ಯರು ರಣಕೈತಂದಿಹ |
ವೃತ್ತಾಂತವ ಕೇಳಿ ರೋಷವಂ ತಳೆದಾಗಂ ||
ವೃತ್ರಾರಿಯು ರಣಕೈತರೆ |
ಧೂರ್ತನು ನುಡಿದನು ಮಘವಗೆ ತಾ ಖತಿ ತಳೆದುಂ ||1|| 16 ||

**ಭೈರವಿ - ಅಷ್ಟ**

ವೃಂದಾರಕಾಧಿಪನೇ | ಸಂಗ್ರಾಮಕೆ |
ನಿಂದೆ ನೀನೆನ್ನೊಡನೆ ||
ಹೊಂದದು ಜಯ ಮಣಿದಿತ್ತು ನಾಕವ ಮರೆ |
ಹೊಂದಿ ಬದುಕು ಸುಮ್ಮನೆ ||1||

ಸುರಲೋಕವಿದ ಬಯಸಿ | ರಣಕೆ ಬಂದೆ |
ಮರುಳನೆ ಮತ್ಸರಿಸಿ ||
ದೊರಕುವದುಂಟೆ ದುಷ್ಟರಿಗೆ ನಾಕವು ಪಿಂತೆ |
ತೆರಳು ನೀನದ ಗ್ರಹಿಸಿ ||2||

ನೀರಿನೊಳಡಗಿರುವ | ಕಳ್ಳನ ಮರೆ |
ಸೇರಿ ದೈತ್ಯಾನ್ವಯವ ||
ಗಾರುಗೆಡಿಸಿದುದ ಮರೆಯದೆ ಪಡೆದಿಹೆ |
ಸಾರಸಾಸನ ವರವ ||3||

ದುಷ್ಕೃತನದಿ ಮೆರೆವ | ದೈತ್ಯರು ಪರ |
ಮೇಷ್ಠಿ ಕೊಟ್ಟಿಹ ವರವ ||
ಕೆಟ್ಟ ಯೋಚನೆಗಳಿಂ ಕೆಡಿಸಿ ಸಾಯುವರಿದು |
ಹುಟ್ಟುಗುಣವು ದಾನವ ||4||

ಮಾತಿನೊಳೇನಹುದು | ರಣದಿ ಸ |
ತ್ವಾತಿಶಯವ ತೋರ್ಪುದು ||
ನಾ ತಳುವದೆ ನೋಳ್ಪೆನಧಟನೆನ್ನುತ ಶರ |
ವ್ರಾತವ ಮುಸುಕಲಂದು ||5|| 21 ||

**ಭಾಮಿನಿ**
ಖಳನ ಶರಹತಿಯಿಂದ ನೆರೆ ಬಸ |
ವಳಿದು ನಿಲದೋಡಿದರೆ ತ್ರಿದಶರು |
ಬಲ ವಿರೋಧಿಯು ತಿಳಿದು ರಣಮಂಡಲವನುಳಿದೈದೆ ||
ತಳೆದ ಗರ್ವದಿ ನಾಕದಲಿ ಮೆರೆ |
ಯಲಿಕೆ ದಾನವ ಸುರಪ ಭಯದಲಿ |
ನಳಿನನಾಭನ ಮರೆಯ ಸೇರುವೆನೆನುತ ನಡೆತಂದ ||1|| 22 ||

**ಕಂದ ಪದ್ಯ**
ಬಿಡುಗಣ್ಣರೊಡೆಯನಾ ಪಾ |
ಲ್ಗಡಲ ತಡಿಗೆ ಬಂದು ಸುರನಿಕರ ಸಹಿತಾಗಂ ||
ಮೃಡಸಖನ ಪದಾಬ್ಜವನುಂ |
ದೃಢಮನದಿಂ ನುತಿಸುತೆಂದನೀ ಪರಿಯಿಂದಂ ||1|| 23 ||

**ಮೇಚು - ಅಷ್ಟ**
ಕ್ಷೀರವಾರಿಧಿಶಯನ | ರಕ್ಷಿಸು ದಯ |
ದೋರಿ ಲಕ್ಷ್ಮೀರಮಣ ||
ನೀರಜಾಂಬಕ ನಿನ್ನ ಹೊರತಿ |
ನ್ಯಾರ ಕಾಣೆವು ಪೊರೆವವರ ಮರೆ |
ಸೇರಿದೆಮ್ಮಲಿ ಬೀರಿ ಕೃಪೆಯನ |
ಪಾರಮಹಿಮನೆ ಸಲಹು ಕರುಣದಿ ||1||

ತ್ರಿದಶರ ಮೊರೆಯ ಕೇಳಿ | ಭಜಕ ಬಂಧು |
ಪದುಮಾಕ್ಷ ಶೀಘ್ರದಲಿ ||
ಪದಕಮಲವಂ ತೋರಿಸುತ ಕರು |
ಣಭಯವನ್ನಿತ್ತು ಪೇಳಿದ |
ಬೆದರಲೇಕೀ ತೆರದಿ ಸಕಲರು |
ಒದಗಿದಾಪತ್ತುಗಳ ಪೇಳಿರಿ ||2||

ಭಕ್ತವತ್ಸಲ ದೇವ | ಲಾಲಿಸು ಪುರು |
ಷೋತ್ತಮ ಬಿನ್ನಪವ ||
ಧೂರ್ತನಾಗಿಹ ದಾರಿಗಾಸುರ |
ಮುತ್ತಿ ನಾಕವ ಗೆಲಿದ ನಮ್ಮನು |
ದೈತ್ಯಮರ್ದನ ನೀನೆ ನಮ್ಮಾ |
ಪತ್ತುಗಳ ಪರಿಹರಿಸಿ ರಕ್ಷಿಸು ||3||

ಇಂತೆಂದು ಮೊರೆಯಿಡಲು | ಕೇಳುತಲೆ ಶ್ರೀ |
ಕಾಂತನು ಮೋದದೊಳು ||
ಚಿಂತಿಸದಿರಿನ್ನದಕೆ ಸುಮನಸ |
ಕಾಂತ ಮುಖ್ಯರು ಧೈರ್ಯ ತಾಳಿರಿ |
ತಾಂ ತಳುವದೈತಂದು ದಾನವ |
ತಿಂಥಿಣಿಯ ಸಂಹರಿಸಿ ಕೊಡುವೆನು ||4|| 27 ||

**ಸೌರಾಷ್ಟ್ರ - ತ್ರಿವುಡೆ**
ಪೊರಟನಾ ಮುರವೈರಿ ಸುಮನಸ |
ನೆರವಿಯನ್ನೊಡಗೊಂಡು ದುರುಳರ |
ತರಿದು ಶರಣರ ಪೊರೆಯೆ ಚಕ್ರವ | ಧರಿಸಿ ಕರದಿ ||1||

ಏರಿ ಗರುಡನ ಪೆಗಲ ಬರಲಾ |
ಚಾರಕರ ಮುಖದಿಂದ ತಿಳಿದಾ |
ದಾರಿಗಾಸುರನೆಂದ ದೈತ್ಯರೊ | ಳಾರುಭಟಿಸಿ ||2||

ಯಾತುಧಾನರು ಕೇಳಿ ನಮ್ಮಲಿ |
ಸೋತ ತ್ರಿದಶರು ಕಡಲೊಳಡಗಿಹ |
ಪೇತುಗನ ಮರೆಗೊಳಲು ಬಂದಿಹ | ನಾತ ರಣಕೆ ||3||

ಪೊರಡಲೆಮ್ಮಯ ಸೇನೆ ಶೀಘ್ರದಿ |
ತರಿದು ಹರಿಯನು ಧುರದಿ ಹಗೆಗಳು |
ಧರೆಯೊಳಿಲ್ಲೆನಿಸುವೆನೆನುತ ಬಲ | ವೆರಸಿ ಪೊರಟ ||4|| 31 ||

**ಮಾರವಿ - ಏಕ**
ಹಕ್ಕಿಯನೇರುತ ಸಮರಕೆ ತ್ರಿದಶರ |
ಪಕ್ಷವಿಡಿದು ಬಂದು ||
ಸೊಕ್ಕಿಹೆಯೆನ್ನಲಿ ಸಿಕ್ಕಿದೆ ನಾ ತರಿ |
ದಿಕ್ಕದೆ ಬಿಡೆ ನಿನ್ನ ||1||

ಸೊಕ್ಕಲ್ಲದಡಮರರ ಸಂಪದವನ |
ಪೇಕ್ಷಿಸುವೆಯ ಧುರದಿ ||
ರಕ್ಷಿಸುವೆನು ದಿಟ ತ್ರಿದಶರ ನಿನ್ನನು |
ಶಿಕ್ಷಿಸುತೀ ದಿನದಿ ||2||

ಬಲ್ಲೆನು ಪೂರ್ವಾಮರರನು ಕಪಟದಿ |
ಚಲ್ಲಬಡಿದ ಹದನ ||
ಸಲ್ಲದು ಯೆನ್ನಲಿ ಹಗೆ ತೀರಿಸೆ ನಾ |
ಕೊಲ್ಲದೆ ಬಿಡೆ ನಿನ್ನ ||3||

ಛಲವನು ಪರಿಕಿಸೆನುತ್ತಲಿ ಘನಶರ |
ಗಳ ದಾನವನೆಸೆಯೆ ||
ಕಳವಳಿಸುತ ಹರಿ ನಿಲಲು ಚಕ್ರವನು |
ಸೆಳೆದಾಕ್ಷಣ ಖಳನು ||4|| 35 ||

**ಮಧ್ಯಮಾವತಿ - ಏಕ**
ಏನೆಲಾ | ಇನಿ | ತೇನೆಲಾ ||ಪ||
ಏನೆಲಾ ಜಗದಲಿ ದಾನವಾಂತಕನಾಗಿ |
ಚೋಣಿಯೊಳೆನ್ನಲಿ ಮೌನದಿ ನಿಂದುದು||1||

ಅರಿಯದೆನ್ನಧಟನು ಹರಿಯ ಪಕ್ಷದಿ ಬಂದು |
ಮರುಳರ ತೆರದಲಿ ಶಿರವ ತಗ್ಗಿಸಿದುದು || ಏನೆಲಾ ||2||

ಧರಣಿಯೊಳಗೆ ಚಕ್ರಧರನೆಂಬ ನಿನ್ನಯ |
ಬಿರುದೆತ್ತ ಪೋದುದು ತಿರುಗಿಸು ಮುಖವನು || ಏನೆಲಾ ||3|| 38 ||

**ಸಾಂಗತ್ಯ - ರೂಪಕ**
ಖಳನೀ ತೆರದಲಿ ಮೂದಲಿಸಿ ಚಕ್ರವಗೊಂಡು |
ನಿಲದೈದೆ ಕಾಣುತ್ತ ಹರಿಯು ||
ಬಲುತರ ಕಳವಳಿಸುತ್ತಲೆಂದನು ದೈತ್ಯ |
ನಲಿ ಸೋಲವಾಯ್ತೆನ್ನ ವಿಧಿಯು ||1||

ಇನಿತಾಯ್ತು ಚಕ್ರವ ದನುಜನು ಸೆಳೆದೊಯ್ದ |
ನೆನಲೇನು ದೈತ್ಯಾರಿಯೆಂಬ ||
ಘನ ಬಿರುದಡಗಿತೆಂದೆನುತ ಶ್ರೀವರನು ಕಂ |
ಬನಿದುಂಬಿ ಮರುಗಿದಾಕ್ಷಣದಿ ||2||

ಕಣ್ಣೀರ ಹನಿಗಳು ಬಿದ್ದವೇಳಂದು ಸು |
ಪರ್ಣ ವಾಹನನ ಜಂಘೆಯೊಳು ||
ಬಣ್ಣಿಸಲೇನುದಿಸಿದರಾದಿ ಶಕ್ತಿ ಸಂ |
ಪನ್ನೆಯರೇಳು ಮಂದಿಗಳು ||3||

ಪರಮೇಶ್ವರಿಯು ಭ್ರಮರಾಂಬಿಕೆ ಜಲದುರ್ಗೆ |
ವರಕಾತ್ಯಾಯಿನಿ ರಕ್ತೇಶ್ವರಿಯು ||
ವರದನ್ನಪೂರ್ಣೆ ಶ್ರೀ ರಾಜರಾಜೇಶ್ವರಿ |
ಇರಿಸಿ ಪೆಸರನಿಂತು ಹರಿಯು ||4||

ದುಗುಡವ ತಳೆದಿರ್ಪ ಖಗವರೂಥನ ಕಂಡು |
ಭಗವತಿ ಮುಖ್ಯರಾ ಕ್ಷಣದಿ ||
ಜಗದೊಡೆಯನ ಬೆಸಗೊಂಡರೀ ಪರಿಯಲಿ |
ದೃಗುಜಲವೇನಿಂದೀ ತೆರದೀ ||5|| 43 ||

**ಸುರುಟಿ - ಏಕ**
ಹರಿಸರ್ವೋತ್ತಮನು | ನೀನೀ |
ಪರಿ ಚಿಂತಿಪುದೇನು ||
ನೆರೆ ಕಂಬನಿಗಳ ಸುರಿಸಿ ನಮ್ಮನೀ |
ತೆರದಲಿ ಸೃಜಿಸುವಡಿರುವ ಕಾರ್ಯವನು ||1||

ಅರಿಯದಾದೆವಿಂದು | ಸಕಲವ |
ನೊರೆದು ದಯಾ ಸಿಂಧು ||
ನೆರವೇರಿಸಿಕೊಂಬುದು ಮನದಿಚ್ಛೆಯ |
ಪರಮ ಪುರುಷ ಮುರಹರ ಕರುಣಾಕರ ||2||

ಶ್ರೀ ದುರ್ಗೆಯರೆಲ್ಲ | ಲಾಲಿಪು |
ದಾದಿತೇಯರುಗಳ ||
ಬಾಧಿಪ ದುರುಳರ ಭೇದಿಸುವರೆ ನಾ |
ನೈದಿ ಸೋತಿಹೆನು ಕಾದಿ ದುರುಳನಲಿ ||3||

ಜಲಜಭವನು ವರವ | ನಿತ್ತರೆ |
ತಳೆದ ಖಳನು ಮದವ ||
ತಲೆಯನರಿದು ಕೊಳುಗುಳದಲಿ ಖಳ ತಾ |
ಸೆಳೆದ ಚಕ್ರವನು ತಳುವದೆ ತರುವುದು ||4||

ಎಂದ ಮಾತ ಕೇಳಿ | ದುರ್ಗೆಯ |
ರಂದು ಮುದವ ತಾಳಿ ||
ಇಂದಿರಾಧವನೆ ಸಂದೇಹವ ಬಿಡು |
ಮಂದಮತಿಯ ಶಿರವಂ ಧರೆಗಿಳುಹಿಸಿ ||5|| 48 ||

**ಭಾಮಿನಿ**
ನಿಗ್ರಹಿಸಿ ದಾನವನ ಸುಮನಸ |
ವರ್ಗವನು ರಕ್ಷಿಸಿ ಬಹೆವೆನುತ |
ದುರ್ಗೆಯರು ನುಡಿದಂದವನು ಕೇಳುತ್ತಲಾ ಹರಿಯು |||
ಶೀಘ್ರದಲಿ ಸಕಲಾಯುಧಗಳನ |
ನುಗ್ರಹಿಸೆ ಕೈಗೊಂಡು ಪೊರಟು ಸ |
ಮಗ್ರ ಸುರ ಬಲ ಸಹಿತ ಬರುತಿರೆ ಶರಧಿ ಘೋಷದಲಿ ||1|| 49 ||

**ಸೌರಾಷ್ಟ್ರ - ತ್ರಿವುಡೆ**
ಕೃತ್ತಿವಾಸನ ನೇಮದಲಿ ಘನ |
ಶಕ್ತನಾಗಿಹ ಗುಳಿಗನೆಂಬವ |
ಮರ್ತ್ಯ ಲೋಕದೊಳೆಡೆಬಿಡದೆ ತೊಳ | ಲುತ್ತಲೀರ್ದ ||1||

ಸತ್ಯಧರ್ಮ ಪರೋಪಕಾರ ಸ |
ಮಸ್ತ ಸದ್ಧರ್ಮಗಳ ಸಾರುತ |
ಧೂರ್ತರನು ಸದೆಬಡಿದು ತಾ ಮೆರೆ | ಯುತ್ತಲೀರ್ದ ||2||

ತಳೆದ ಶ್ರಮವನು ಕಳೆಯೆ ತನ್ನಯ |
ತಲೆಯ ಪಶ್ಚಿಮ ಘಟ್ಟದಲಿ ಕಾ |
ಲ್ಗಳನು ಪಡುಗಡಲಿಂಗೆ ಚಾಚುತ | ಮಲಗಿರಲ್ಕೆ ||3||

ನಿದ್ರೆಯಿಂದಿರ್ಪವನನೆಬ್ಬಿಸೆ |
ಚೋದ್ಯವೇನೆಂದೆನುತ ಮೈಮುರಿ |
ದೆದ್ದು ನೋಡಿದ ದುರ್ಗೆಯರ ನೆರೆ | ಶುದ್ಧ ಮನದಿ ||4|| 53 ||

**ಭಾಮಿನಿ**
ಹರಹರಾ ಯಾರಿವರು ನೋಡಲು |
ತರಣಿಕೋಟಿಪ್ರಕಾಶ ತೇಜದಿ |
ಮೆರೆಯುತೀರ್ಪರು ಶಕ್ತಿಸಂಪನ್ನೆಯರು ಭಾವಿಸಲು ||
ಧರೆಯ ಭಾರವ ತಿದ್ದಿ ಸುಜನರ |
ಪೊರೆಯಲೆಂದವತರಿಸಿ ಬಂದಿಂ |
ತಿರುವರವರನ್ನರಿಯಬೇಕೆನ್ನುತ್ತ ಬೆಸಗೊಂಡ ||1|| 54 ||

**ಕೇದಾರಗೌಳ – ಅಷ್ಟ**

ಮತ್ತಕಾಶಿನಿಯರು ಯಾರು ನೀವೈದುವ |
ದೆತ್ತಲು ಪರಿಕಿಸಲು ||
ಶಕ್ತಿಸಂಪನ್ನೆಯರೆನ್ನನೆಬ್ಬಿಸಿದ ನಿ |
ಮಿತ್ತವದೇನೆಂದೆನು ||1||

ದುರುಳ ದಾರಿಗನ ಸಂಹರಿಸಿ ಸುಮನಸರ |
ಪೊರೆಯಲೆಮ್ಮನು ಸೃಜಿಸಿ ||
ಹರಿ ನಿರೂಪಿಸೆ ಬಂದು ಪಥ ಕಟ್ಟಿ ಮಲಗಿಕೊಂ |
ಡಿರುವ ನಿನ್ನ ನಿರೀಕ್ಷಿಸಿ ||2||

ಅರಿಯೆ ನಿನ್ನಿರವನೆಚ್ಚರಿಸಿದೆವಾವಯ್ಯ |
ವರದೀರ್ಘದೇಹಿ ಕೇಳು ||
ಕರೆವರು ಸಪ್ತದುರ್ಗೆಯರೆಂದು ಯಾರು ನೀ |
ನೊರಗಿರ್ಪುದೇನು ಪೇಳು||3|| 57 ||

**ಭೀಮ್‌ಪ್ಲಾಸ್ – ರೂಪಕ (ಸಾಂಗತ್ಯ - ರೂಪಕ)**

ಸಪ್ತದುರ್ಗೆಯರೆಂದ ನುಡಿ ಕೇಳಿ ಗುಳಿಗನು |
ಭಕ್ತಿಭಾವದೊಳಡಿಗೆರಗಿ ||
ನುತಿಸಿ ಪೇಳಿದ ಶ್ರೀ ದೇವಿಯರೆನ್ನ ವೃ |
ತ್ತಾಂತಗಳನ್ನು ಲಾಲಿಪುದು ||1||

ಚಿತ್ತಜಾರಿಯ ನೇಮವೆತ್ತು ಜಗದಿ ಧರ್ಮ |
ಸತ್ಯಗಳನು ನೆಲೆಗೊಳಿಸೆ ||
ಸುತ್ತುತ ಧರಣಿಯ ತಳೆದ ಶ್ರಮವನೀಗ |
ಲರ್ತಿಯಿಂದೊರಗಿರ್ದೆನೈಸೇ ||2||

ಕರೆವರು ಗುಳಿಗನೆಂದೆನುತೆನ್ನ ನಿಮ್ಮಯ |
ಚರಣ ಸಂದರ್ಶನದಿಂದ ||
ಪರಮ ಪಾವನನಾದೆ ಪದಸೇವೆಗಳನಿತ್ತು |
ಪೊರೆವುದು ನೀವೆನ್ನನೆಂದ ||3||

ದೈತ್ಯರ ವಧಿಸಲು ಭೃತ್ಯನೀನೈತರೆ |
ರಕ್ತಪಾನವ ನಿನಗಿತ್ತು ||
ತೃಪ್ತಿಗೊಳಿಸುವೆವೆಂದೆನೆ ಕೇಳಿ ಪೊರಟನು |
ಭಕ್ತಿಯಿಂದಾಗ ಗುಳಿಗನು ||4|| 61 ||

**ಭಾಮಿನಿ**

ಬಂದರಾ ದುರ್ಗೆಯರು ಗುಳಿಗನ |
ಹೊಂದಿಕೊಳುತಲೆ ಶೋಣಿತಾಪುರ |
ಕಂದು ಯೋಚಿಸಿ ಖಳನ ವಶದೊಳಗಿಹ ಸುದರ್ಶನವ ||
ಹಿಂದೆ ಪಡೆಯದೆ ಗೆಲಲರಿದು ನಮ |
ಗೆಂದೆನುತಲಾ ಹಿರಿಯ ಭಗವತಿ |
ಬಂದಳಾ ಪುರದೊಳಗೆ ಭಿಕ್ಷುಕಿಯಾಗಿ ಸಂಚರಿಸಿ ||1|| 62 ||

**ಮೇಚು ಕಲ್ಯಾಣಿ - ಅಷ್ಟ**
ಭಿಕ್ಷೆಯ ನೀಡಿರವ್ವ | ಪುಣ್ಯಾತ್ಮೆಯ |
ರೀಕ್ಷಿಸುತಲೆ ಕಷ್ಟವ ||
ಕುಕ್ಷಿಗಾಹಾರವಿಲ್ಲದೆ ನೊಂದೆ ಕರುಣ ಕ |
ಟಾಕ್ಷವ ಬೀರುತೆನ್ನ | ರಕ್ಷಿಸಿ ಮುನ್ನ ||1||

ಎತ್ತಿದನಾರತಿಯ | ಶ್ರೀ ಚಕ್ರಕೆ |
ಭಕ್ತಿಯಿಂ ಖಳರೆರೆಯ ||
ನಿತ್ಯದೊಳೆನ್ನ ಸಲಹುವದೆನುತ ತಾ |
ನರ್ತಿಯಿಂ ಸತಿ ಸಹಿತ | ಭಕ್ತಿಯೊಳು ತಾ ||2|

ದಾರಿಗಾಸುರನಂದಿಲಿ | ನಿತ್ಯಾಹ್ನಿಕ |
ತೀರಿಸೆ ತವಕದಲಿ ||
ಸಾರುತಿರಲು ನದಿಯೆಡೆಗಾಗಿ ಭಿಕ್ಷುಕಿ |
ದಾರಿಯೊಳ್ ತಡೆದೆಂದಳು | ದಾನವನೊಳು ||3||

ಪುಣ್ಯವಂತನೆ ಲಾಲಿಸು | ಈ ಮುದುಕಿಗೆ |
ಅನ್ನದಾನವ ಪಾಲಿಸು ||
ಮೊನ್ನಿನಾರಭ್ಯಾಹಾರವ ಕಾಣೆನುಳಿಯದು |
ಎನ್ನ ಹರಣ ಉಳಿಸು | ನೀ ರಕ್ಷಿಸು ||4||

ಮೊರೆಯಿಡುವವಳ ಕಂಡು | ದೈತ್ಯನ ಮನ |
ಕರಗಲು ನುಡಿದನಂದು ||
ಬರಿದೆ ಮರುಗಲೇಕೆ ತೆರಳರಮನೆಗೆನ್ನ |
ಪಿರಿಯರಸಿಯಲಿ ಕೇಳು | ಭಿಕ್ಷೆಯ ಕೊಡಲು ||5|| 67 ||

**ಭಾಮಿನಿ**
ಅರಸಿ ಭಿಕ್ಷೆಯನೀಯದಿದ್ದರೆ |
ಹರಣವುಳಿಯದು ದನುಜತಿಲಕನೆ |
ಪರಮ ಪಾತಕ ಹೊದ್ದುವುದು ನಿನಗೆನಲು ಭಿಕ್ಷುಕಿಯು ||
ತೆರಳು ನೀನೀಯದಿರೆ ಭಿಕ್ಷೆಯ |
ಕರೆದು ಪೇಳಲು ಸೂಚಿಸುವೆ ಕೊಡು |
ವರೆ ಮನದಿ ಶಂಕಿಸದಿರೆನುತಲೆ ನದಿಗೆ ತೆರಳಿದನು ||1|| 68 ||

**ಪೂರ್ವಿ – ತ್ರಿವುಡೆ (ಸೌರಾಷ್ಟ್ರ – ತ್ರಿವುಡೆ)**
ತೆರಳೆ ದಾನವ ನದಿಗೆ ಭಗವತಿ |
ತೊರೆದು ಭಿಕ್ಷುಕಿ ರೂಪವನು ನವ |
ತರುಣಿಯಾದಳು ಮೋಹನಾಂಗದಿ | ಮೆರೆದಳಂದು ||1||

ಬಂದಳಾ ಖಳನರಮನೆಗೆ ಮುದ |
ದಿಂದ ಭಾಗೀರಥಿಯೆನುವ ಪೆಸ |
ರಿಂದ ರಂಭಾಮಣಿಯು ಕಾಣುತ | ಲೆಂದಳಾಗ ||2||

ಯಾರು ಪೇಳೆಲೆ ಸುಂದರೀಮಣಿ |
ಮಾರನರಸಿಯ ತೆರದಿ ಕಾಣುವೆ |
ನೀರಜಾಂಬಕಿ ಬಂದುದೇಕೆನೆ | ನೀರೆ ಮಣಿದು ||3||

ಅರಸಿ ಕೇಳ್ ನಿನ್ನೆರೆಯ ಸ್ನಾನಕೆ |
ತೆರಳುವವನೆನಗೊರೆದು ಕಳುಹಿದ |
ವರಸುದರ್ಶನವನ್ನು ತಾರೆಂ | ದಿರದೆ ಬಂದೆ ||4||

ಕೊಡುವದದನೆನೆ ಕೇಳಿ ಚೋದಿಗ |
ಪಡುತ ದೈತ್ಯನ ಮಡದಿಯಾಕೆಗೆ |
ನುಡಿದಳೆಲೆ ನೀನೆಂದ ಮಾತಿದು | ಕಡುವಿಚಿತ್ರ ||5||

ಧುರದಿ ಹರಿಯನು ಗೆಲಿದು ತಂದಿಹ |
ನೆರೆಯನಂದು ಸುದರ್ಶನವನೆಲೆ |
ತರುಣಿಗೀವರೆ ಪೇಳ್ವರುಂಟೇ | ತೆರಳು ಬರಿದೆ ||6|| 74 ||

**ವಾರ್ಧಕ**

ಎಂದು ಧಿಕ್ಕರಿಸೆ ಭಾಗೀರಥಿಯ ಬೇಗ ಕರೆ |
ದೆಂದಳೆಲೆ ದನುಜೇಶ ಕೊಡಳು ನಿನ್ನರಸಿಯೊಳು |
ಬಂದು ಬೆಸಗೊಳಲು ನೀ ಪೇಳೆನಲು ಸ್ನಾನಗೈವಲ್ಲಿಂದ ಕರೆದೆಂದನು ||
ಮಂದಗಾಮಿನಿಯೆ ಕೊಡು ಬೇಡಿದುದ ಮನದೊಳಗೆ |
ಸಂದೇಹ ಬೇಡೆನುತಲದ ಕೇಳಿದಾಕ್ಷಣದಿ |
ತಂದು ಕೊಟ್ಟಳು ಸುದರ್ಶನವ ರಂಭಾಮಣಿಯು ಕಪಟವನ್ನರಿಯದಂದು ||1|| 75 ||

**ಕೇದಾರಗೌಳ - ಅಷ್ಟ**

ತೀರಿಸಿ ಸ್ನಾನವ ದಾರಿಗಾಸುರ ಬಂದು |
ಸೇರಿದನರಮನೆಯ ||
ಮಾರವೈರಿಯ ಪೂಜಿಸುತ್ತಿರೆ ಕಾಣದೆ |
ಚಾರು ಸುದರ್ಶನವ ||1||

ಮಡದಿಯ ಬೆಸಗೊಳೆ ನುಡಿದಳೈತಂದಿರ್ದ |
ಜಡಜಗಂಧಿನಿಗಿತ್ತೆನು ||
ದೃಢದಿ ನಿನ್ನಾಜ್ಞೆಯೊಳೆನೆ ಕಪಟವನರಿ |
ತೊಡನಾರ್ಭಟಿಸುತೆಂದನು ||2||

ಅರರೆ ತಪ್ಪಾದುದು ತರುಣಿಯ ಕೊಂದು ನಾ |
ತರುವೆ ಸುದರ್ಶನವ ||
ಹರ ಕಮಲಜರು ಬಂದಡ್ಡೈಸಿದರು ಬಿಡೆ |
ಪರಿಕಿಪೆ ಕೃತ್ರಿಮವ ||3||

ಕಳುಹಿದರಾಕ್ಷಣ ಗುಳಿಗನ ಸಮರಕ್ಕೆ |
ಮುಳಿದು ರಣಕೆ ನಿಂದನು ||
ಖಳನೊಳು ಚೋದ್ಯವ ತಳೆದು ದಾನವ ರಣ |
ಕಲಿಯಲಿ ಬೆಸಗೊಂಡನು ||4|| 79 ||

**ಮಾರವಿ - ಏಕ**

ಫಡ ಫಡ ಭೂತವೆ ನುಡಿ ನೀನ್ಯಾರೆ |
ನ್ನೊಡನೆ ರಣಕೆ ನಿಂದು ||
ಕೊಡುವರೆ ಹರಣವ ನಡೆತಂದಿಹೆ ನಿ |
ನ್ನೊಡಲರಿಯುವೆನಿಂದು ||1||

ನಡೆಸುತಧರ್ಮವ ಪೊಡವಿಯೊಳ್ ಮೆರೆಯುವ |
ದಡಿಗರ ತಲೆಗಡಿದೂ ||
ಕೆಡಹುವ ಗುಳಿಗನು ಕಡುಗಲಿಯಾಗಿಹೆ |
ಮೃಡನಾಜ್ಞೆಯ ಪಡೆದೂ ||2||

ವಿಧಿ ಹರಿ ಭವರೆನ್ನಧಟಿಗೆ ಮನದಲಿ |
ಬೆದರುತಿಹರು ನಿನ್ನ ||
ಕದನವ ಬಗೆವೆನೆ ಮದಮುಖ ಪೋಗೆಲೊ |
ಇದಿರಾಗದೆ ಮುನ್ನ ||3||

ಮದವೇರಿತು ನಿನಗಿದಿರಿಲ್ಲೆನುತಲೆ |
ವಿಧಿಯ ವರವ ಪಡೆದು ||
ಪದುಮನಾಭನ ಗೆಲಿದ ವಿಕ್ರಮ ತೋ |
ರದನೆನ್ನೊಡನಿಂದು ||4||

ಹರಿಯನು ಮಿಗಿಸುವ ಧುರ ವಿಕ್ರಮನನು |
ಪರಿಕಿಪೆನೆಂದಾಗ ||
ಉರಿಯನುಗುಳಿ ಘನಶರಗಳ ಸುರಿಸಲು |
ತರಹರಿಸಿದ ಗುಳಿಗ ||5|| 84 ||

**ಪಂಚಾಗತಿ - ಮಟ್ಟೆ**
ಹರನ ದೂತ ದೈತ್ಯನೊಡನೆ |
ಧುರದಿ ಸೋತ ಬಗೆಯ ಕಂಡು |
ಧರಿಸಿ ಧನುಶರಗಳ ದೇವಿ | ಬಳಿಕ ರೋಷದಿ ||
ದುರುಳನಿದಿರು ಬಾಣಗಳನು |
ಸುರಿದು ವಿಕ್ರಮದಲಿ ನಿಲಲು |
ಪರಿಕಿಸುತ್ತ ನುಡಿದ ದೈತ್ಯ | ರೆರೆಯ ಕೋಪದಿ ||1||

ಅರರೆ ಮಾನಿನಿಯರು ನಮ್ಮ |
ಮರುಳು ಮಾಡಿ ಚಕ್ರವನ್ನು |
ಹರಿಸಿ ತಂದ ಭಂಡಳ್ಯಾರು | ಅರುಹಿ ನಮ್ಮಲಿ ||
ಹರಣದಾಸೆಯಿರ್ದಡದನು |
ಮರಳಿ ಒಪ್ಪಿಸುತ್ತ ಪಾದ |
ಕ್ಕೆರಗಲಾಗಿ ನಿಮ್ಮ ಪೊರೆವೆ | ಕರುಣದಿಂದಲಿ ||2||

ಪೊರೆವ ದಾತನಹುದು ಸಾಕು |
ಬರಿದೆ ಗಳಹಬೇಡ ಕಾರ್ಯ |
ಹರಣದಾಸೆಯಿರಲು ನಿನಗೆ | ಸುರರ ಸಂಪದ ||
ಮರಳಿ ತಪ್ಪನೊಪ್ಪಿ ಶರಣು |
ಬರಲು ನಿಮ್ಮ ಕಾವೆನಲ್ಲ |
ದಿರಲು ಋಣವು ತೀರಿತಿಂದು | ಧರೆಯೊಳೆಂದರು ||3||

ನಾರಿಯರೆನುತ್ತ ಮನದಿ |
ಸೈರಿಸುತ್ತ ನೀತಿಯನ್ನು |
ಸಾರಿ ನುಡಿಯೆ ಗರ್ವ ಶಿರಕೆ | ಏರಿತಿಂದಿಲಿ ||
ಯಾರು ನಿಮ್ಮ ಶಿರವ ಕಾವ |
ಧೀರರಿರಲು ಬರಲೆನುತ್ತ |
ಭೂರಿಶರಗಳನ್ನೆಸೆಯಲು | ಘೋರ ದನುಜನು ||4||

ಗಾರುಗೆಡಿಸಿ ಬಾಣಗಳನು |
ಧೀರನಾದಡೀಕ್ಷಿಸಿನ್ನು |
ನಾರಿಯರ ವಿಕ್ರಮವನೆಂದು | ಕೂರಲಗುಗಳ ||
ಘೋರನೆಸೆಯೆ ದನುಜನಾನ |
ಲಾರದೊಡನೆ ಭಯದಿ ಸೀಳಿ |
ಧಾರಿಣಿಯ ರಸಾತಳವನು | ಸೇರಿಕೊಂಡನು ||5|| 89 ||

**ಭಾಮಿನಿ**
ತಿಳಿದದನು ಭಗವತಿಯು ಶೀಘ್ರದಿ|
ಖಳನ ವಧಿಸುವ ತವಕದಿಂದಲೆ |
ಇಳಿದಳಾ ಪಾತಾಳಕೆ ಮಹಾ ಕಾಳಿರೂಪಿನಲಿ ||
ಮುಳಿದ ದೈತ್ಯನನರಸಿ ಪಿಡಿದ |
ಪ್ಪಳಿಸಿ ಸೀಳುತ ಕೆಡಹಿ ರಕ್ತವ |
ಗುಳಿಗಗಿತ್ತರೆ ಕುಡಿದು ತೇಗಿದನವನು ಸಂತಸದಿ ||1|| 90 ||

**ಆರಭಿ - ರೂಪಕ**
ಕಾಳಿಯ ಮನದ ಖಾತಿಯ ಪರಿಹರಿಸಲು |
ಶ್ರೀಲಲಾಮನು ಸೃಜಿಸುತಲಿ ||
ಬಾಲಕನೋರ್ವನ ಕಳುಹೆ ಬಂದನು ಧರ್ಮ |
ಪಾಲನು ನುತಿಸುತಾಕೆಯನು ||1||

ನುತಿಸುವ ಧರ್ಮಪಾಲನ ಮನ್ನಿಸುತ ತನ್ನ |
ಖತಿಯನ್ನುಳಿಯುತ ಶ್ರೀ ಕಾಳಿ ||
ಹಿತದಿ ಬಂದಳು ದುರ್ಗೆಯರ ಕೂಡಿಕೊಂಡು ಶ್ರೀ |
ಪತಿಗೀಯುವರೆ ಸುದರ್ಶನವ ||2||

ವರದುರ್ಗೆಯರ ಕಂಡು ಹರಿಯು ಸಂತಸದಿಂದ |
ಪರಮ ಮೃಷ್ಟಾನ್ನ ಭೋಜನದಿ ||
ಹರುಷಗೊಳಿಸಲು ಶ್ರೀ ಕಾಳಿ ತೃಪ್ತಿಯ ಹೊಂದ |
ದಿರೆ ಚಕ್ರದಿಂ ಕಿರುಬೆರಳ ||3||

ಕಡಿದು ರಕ್ತದಿ ತೃಪ್ತಿಪಡಿಸುತ್ತ ಬಳಿಕೆಂದ |
ಮೃಡಸಖ ದೇವಿಯರೊಡನೆ ||
ನಡೆದು ಭೂತಳದಲ್ಲಿ ನವರಾತ್ರಿ ಪೂಜೆಯ |
ಪಡೆದು ಭಕ್ತರನು ಪಾಲಿಪುದು ||4|| 94 ||

**ವಾರ್ಧಕ**
ಕುಂದಣದ ನಾವೆಯಲಿ ಪೋಗಿ ನೀವೆಂದಾ ಮು |
ಕುಂದ ಪೇಳಿದರೊಪ್ಪದಿರಲು ಬೇಕಾದುದ |
ನ್ನಿಂದು ಕೇಳಿದರೀವೆನೆಂದ ಹರಿಯೊಡನೆ ಶ್ರೀ ವೈಕುಂಠದಲಿ ಮೆರೆಯುವ ||
ಗಂಧದ ಕುಜದ ನಾವೆಯಲಿ ಪೋಪೆವೆನಲು ವರ |
ಸಿಂಧುಶಯನನು ಮಧ್ಯಭಾಗವನು ತೆಗೆಯುತಲೆ |
ಹೊಂದಿಸುತ ತುದಿಬುಡವ ನಿಲಿಸೆ ವೃಕ್ಷವ ಶಿಲ್ಪಿಯರನರಸಿ ತರುವದೆಂದ ||1|| 95 ||

**ಹಂಸಧ್ವನಿ – ರೂಪಕ (ಸಾಂಗತ್ಯ – ರೂಪಕ)**
ಅರಸುತ್ತ ಶಿಲ್ಪಿಯನೈತಂದರಾ ದುರ್ಗೆ |
ಯರು ಕೇರಳಕೆ ವಹಿಲದಲಿ ||
ವರಶಿಲ್ಪಿಯೋರ್ವ ಸಮಾಧಿ ಹೊಂದಿರಲಿಕಾ |
ವರಿಸಿರೆ ಹುತ್ತವಾತನೊಳು ||1||

ಜೀವ ಕಲೆಯನಿತ್ತು ನಾವೆಯ ಮಾಡೆನೆ |
ದೇವಿಯರಲಿ ಹತ್ತು ವರಹ ||
ನೀವೀಯಬೇಕೆನೆ  ಧನವನರಸಿ ಪಾಂಡ್ಯ |
ಭೂವರನೆಡೆಗಾಗಿ ಬರಲು ||2|| 97 ||

**ಆರಭಿ - ತ್ರಿವುಡೆ (ಸೌರಾಷ್ಟ್ರ – ತ್ರಿವುಡೆ)**
ಇತ್ತ ಪಾಂಡ್ಯ ನೃಪಾಲ ತನ್ನಯ |
ಪತ್ನಿ ನಾಗಕುಮಾರಿ ಸಹಿತಲೆ |
ಪುತ್ರರಿಲ್ಲದೆ ಮನಮರುಕದಿಂ | ನಿತ್ಯ ಬಳಲಿ ||1||

ಫಾಲನೇತ್ರನ ಭಜಿಸಿ ಜನಿಸಿದ |
ಬಾಲಕನ ಮುದ ತಾಳಿ ಕುವರಗೆ |
ನೀಲಕಂಠನೆನುತ್ತ ಪೆಸರಿಸಿ | ಭೂಲಲಾಮ ||2||

ಒಂದು ದಿನ ಓಲಗದೊಳಿರುತಿರೆ |
ಬಂದರಾ ದೇವಿಯರು ಕಾಣುತ |
ಹೊಂದಿ ಮುದವನು ಉಪಚರಿಸುತಲೆ | ಚಂದದಿಂದ ||3|| 100 ||

**ಸುರುಟಿ - ಏಕ**
ಇತ್ತ ಗಮನವೇನು | ಬಂದುದ | ವಿಸ್ತರಿಸುವದದನು ||
ಅರ್ತಿಯಿಂದಲೀಯವೆನೆಂದರೆ ಭೂ |
ಪೋತ್ತಮನಿಂಗಾ ದೇವಿಯರೆಂದರು ||1||

ಪೃಥ್ವಿಪಾಲ ಕೇಳು | ಕಾರ್ಯ ನಿ | ಮಿತ್ತದಿ ತವಕದೊಳು ||
ಹತ್ತುವರಹಗಳ | ಸಾಲವಾಗಿ ನೀ |
ನಿತ್ತರೆ ನಿನ್ನುಪಕಾರವ ಮರೆಯೆವು ||2||

ಒತ್ತೆಯಿಡದೆ ನೀವು | ಸಾಲವ | ನಿತ್ತಪುದನುಚಿತವು ||
ಮತ್ತಕಾಶಿನಿಯರೇನಾದರು ಸ |
ದ್ವಸ್ತುನಿತ್ತರೆ ಕೊಡುವೆನು ಸಾಲವ ||3||

ಕೇಳುತ ವಚನವನು | ಭಗವತಿ | ಕಾಲಿನ ಗೆಜ್ಜೆಯನು ||
ಭೂಲಲಾಮನಿಗೆ ಕೊಡಲಾಕ್ಷಣದೊಳು |
ಸಾಲವನಿತ್ತನು ಹತ್ತು ವರಹಗಳ ||4|| 104 ||

**ವಾರ್ಧಕ**
ದಿನವೆಂಟರವಧಿಯಂ ಪೇಳಿ ಭೂಪಾಲನಲಿ |
ಧನವ ಪಡೆದೀಯೆ ಶಿಲ್ಪಿಗೆ ನಾವೆಯಂ ರಚಿಸಿ |
ಸನುಮತದೊಳಾ ಕುಜದ ಮಧ್ಯಭಾಗವ ತೆಗೆದು ತುದಿ ಬುಡವ ಜೋಡಿಸುತಲಿ ||
ವನಜಾಕ್ಷನಲಿ ಪಡೆದು ಹತ್ತು ವರಹಗಳನಾ |
ತನ ನೇಮಗೊಂಡು ನಾವೆಯ ಸೇರುತವರೆಲ್ಲ |
ಜನಪಾಲ ಪಾಂಡ್ಯರಾಜನ ಕಾಣಬೇಕೆಂದು ವಹಿಲದಿಂದಾಗ ಬರಲು ||1|| 105 ||

**ಮೋಹನ – ಅಷ್ಟ (ಕೇದಾರಗೌಳ – ಅಷ್ಟ)**
ಭೂಲಲಾಮನು ತನ್ನ ಬಾಲಕನಾಗಿಹ |
ನೀಲಕಂಠನ ಕರೆದು ||
ಕಾಲಿಗೆ ದೇವಿಯ ಗೆಜ್ಜೆಗಳನು ಕಟ್ಟಿ |
ಲೀಲೆಯಿಂ ಕುಣಿಸುತಿರೆ ||1||

ಆ ಸಮಯದೊಳು ಮಹೀಶನ ಸಭೆಯ ಪ್ರ |
ವೇಶಿಸಿ ದೇವಿಯರು ||
ಆ ಸುಕುಮಾರ ಸಂತೋಷದಿ ನಲಿವುದ |
ನೀಕ್ಷಿಸಿ ಕೋಪದೊಳು ||2||

ಭಗವತಿಯಾತನ ತೆಗೆದು ಬಿಸುಟಳು ನಾ |
ವೆಗೆ ಕಾಣುತಲಿ ಹದನ ||
ಒಗುವ ಕಂಬನಿಯಿಂದ ನಡೆತಂದು ನೃಪನು ದೇ |
ವಿಗೆ ಮಣಿದಾ ಕ್ಷಣದಿ ||3||

ಪೊರೆಯಬೇಕೆನ್ನನು ಮರೆತಪರಾಧವ |
ಕರುಣವನಿರಿಸುತ್ತಲಿ ||
ಅರಿಯದೆ ನಿಮ್ಮ ಮಹಿಮೆಗಳ ಗೈದೆನೀ |
ಪರಿ ತಪ್ಪುಗಳ ಮನ್ನಿಸಿ ||4|| 109 ||

**ವಾರ್ಧಕ**
ನುತಿಸಿ ವಿಧವಿಧದಿ ಮರುಗುವ ನೃಪಾಲನನು ಭಗ |
ವತಿಯು ಮನ್ನಿಸಿ ಕರುಣದಿಂದ ನುಡಿದಳು ನೃಪಗೆ |
ಕ್ಷಿತಿಪ ಬಿಡು ಕ್ಲೇಶವಂ ನಿನ್ನ ಸುತ ನಮ್ಮವಂ ನೆರೆ ನಿಂದ ನಮ್ಮ ಸ್ಥಳದಿ ||
ಪ್ರಥಮ ಪೂಜೆಯು ನಿನ್ನ ಕುವರನಿಂಗಾತನೀ |
ಕ್ಷಿತಿಯ ದೇಗುಲಗಳಲಿ ಧ್ವಜವಾಗಿ ರಂಜಿಸಲಿ |
ಸತತವೆಂದವನ ಸಂತೈಸಿ ಗುಳಿಗಾದ್ಯರನ್ನೊಡಗೊಂಡು ಹೊರವಂಟರು ||1|| 110 ||

**ಕೇದಾರಗೌಳ - ಅಷ್ಟ**
ಧೂರ್ತ ಹಿರಣ್ಯಾಕ್ಷನನು ಸಂಹರಿಸಿದಂತ |
ಶ್ವೇತವರಾಹ ಸ್ವಾಮಿ ||
ಭೂತಳದೊಳಗಿರಬೇಕೆಂದು ಶರಧಿಯ |
ನೋತು ಪೊಕ್ಕಲ್ಲಿರಲು ||1||

ಮೆರೆವ ನಾವೆಯ ಕಂಡು ಬರುವವರ್ಯಾರಿದ |
ನರಿಯಬೇಕೆಂದೆನುತ ||
ಶರಧಿಯೊಳೆಸೆವ ನಾವೆಯ ಬಳಿಗೈತಂದು |
ಪರಿಕಿಸಿ ದೇವಿಯರ ||2||

ಯಾರು ನೀವೆಲ್ಲಿಂದ ಬಂದಿರಿ ಮುಂದಕೆ |
ಸಾರುವದೆಲ್ಲಿಗಿನ್ನು ||
ವಾರಿಧಿಯೊಳಗೇನು ದೊರೆಯದಿರಲು ನೌಕೆ |
ಸೂರೆಗೈಯುವೆನು ನಾನು ||3||

ಶ್ವೇತವರಾಹನೆ ಮಾತ ಲಾಲಿಸು ಶ್ರೀನಿ |
ಕೇತನನಾಜ್ಞೆಯಲಿ ||
ಭೂತಳಕೈದುವೆವೈ ಧರ್ಮರಕ್ಷಣೆ |
ಗೀ ತೆರದಿಂದ ನಾವು ||4||

ನಾವೆಗೆ ನೀನಧಿನಾಯಕನಾಗಿ ಸ |
ಹಾಯವ ಮಾಡಿದರೆ ||
ಭೂವಲಯದಿ ನಮ್ಮ ಭಕ್ತರು ನಿನ್ನನ್ನು |
ಸೇವಿಪಂತೆಸಗುವೆನು ||5|| 115 ||

**ಕಾಂಭೋದಿ - ಝಂಪೆ**
ದೇವಿಯರ ನುಡಿಗಾ ವರಾಹ ಸ್ವಾಮಿಯು ನುಡಿದ |
ನಾ ಮುದದಿ ಬರುವೆನೆಂದೆನುತ ||
ನಾವೆಯನ್ನೇರಿ ಹೊರವಂಟು ಭರದಿಂದ ಬರ |
ಲೀ ವಿಧದೊಳವರು ಶರಧಿಯಲಿ ||1||

ಬಂದರವರೊಲಿದು ಕಾಸರಗೋಡಿನೆಡೆಗೆ ಬಳಿ |
ಕೆಂದರು ವರಾಹ ಸ್ವಾಮಿಯಲಿ ||
ಇಂದುತ್ತರಿಸಿಹ ಪಥ ಮುಂದೆ ಪೋಗಲಿಹ ಪಥ |
ಕುಂದು ಹೆಚ್ಚುಗಳ ಪೇಳುವುದು ||2||

ಹಿಂದು ಮುಂದಕೆ ನೋಡುತೆಂದ ನಾವೆಯನೇರಿ |
ಮುಂದೆ ತೆರಳಲು ದೂರವಿಹುದು ||
ಬಂದ ಪಥ ಕಿರಿದೆಂದನವ ವಿನೋದಕ್ಕಾಗಿ |
ಯೆಂದರವರೊಲಿದು ಗುಳಿಗನಲಿ ||3||

ಗುಳಿಗ ನಾವೆಯನೇರಿ ತಿಳುಹಿದನು ಸತ್ಯವನು |
ಕಳೆದು ಬಂದೆವು ಬಹಳ ಪಥವ ||
ಉಳಿದ ದಾರಿಯು ಸ್ವಲ್ಪವೆನಲು ಖಾತಿಯನವರು |
ತಳೆದೆಂದರಾ ವರಾಹನಲಿ ||4||

ಹುಸಿಯನಾಡಿದೆ ನಮ್ಮೊಳೆಂದವನ ಮುಡಿಯ ಪಿಡಿ |
ದೆಸೆಯೆ ಪಶ್ಚಿಮ ಘಟ್ಟದೆಡೆಗೆ ||
ಬಸವಳಿದು ಮರುಗಿ ದೇವಿಯರ ಪದಗಳಿಗೆ ವಂ |
ದಿಸಿ ಕ್ಷಮಿಸಿ ಸಲಹಬೇಕೆನಲು ||5||

ಬಳಿಕ ರೋಷವ ತೊರೆದು ತಳೆದು ಶಾಂತಿಯನು ಮನ |
ದೊಳಗೆ ನುಡಿದರು ವರಾಹನಲಿ ||
ಇಳೆಯೊಳಗೆ ಪಂಜುರ್ಲಿ ದೈವವೆನುತಲಿ ಬಾಳು |
ಸಲಿಸಿ ಭಕ್ತರ ಬೇಡಿಕೆಯನು ||6|| 121 ||

**ವಾರ್ಧಕ**
ಇತ್ತಭಯವನು ಹೊರಟು ಕುಂಬ್ಳೆ ಮಂಗಲಪಾಡಿ |
ಉತ್ತರಿಸುತುಪ್ಪಳವನಾ ಪಟ್ಟತೂರ ಸಹ |
ಮತ್ತೆ ಮಂಜೇಶ್ವರವ ಉದ್ಯಾವರುಳ್ಳಾಲ ವಡ್ಕ ಮೊದಲಾದೂರ್ಗಳ ||
ಆರ್ತಿಯಿಂದಲ್ಲಲ್ಲಿ ಮೆರೆವ ವಿಭವವ ಕಾಣು |
ತತ್ತ ಕುದ್ರೋಳಿಯನು ಸೇರಿ ಕೊಟದ ಕಳವ |
ನುತ್ಸಹದಿ ರಚಿಸಿ ಮತ್ತಲ್ಲಿಂದ ಪೊರಟವರು ಚಿತ್ರಾಪುರಕೆ ಬಂದರು ||1|| 122 ||

**ಮೋಹನ – ಅಷ್ಟ (ಕೇದಾರಗೌಳ – ಅಷ್ಟ)**
ಪರಿಕಿಸುತಲೆ ಚಿತ್ರಾಪುರವನು ಯೋಗ್ಯವಾ |
ಗಿರುವುದಿದುನಿವಾಸಕೆ ||
ವರಭಕ್ತರಿಷ್ಟಾರ್ಥ ಸಲಿಸುವೆನೆಂದಲ್ಲಿ |
ಕಿರಿಯ ದುರ್ಗೆಯು ನಿಂದಳು ||1||

ಉಳಿದವರೆಲ್ಲರು ಸಸಿಹಿತ್ಲಿಗೆ ಬರೆ |
ನಲವಿನಿಂದಲೆ ಭರದಿ ||
ನೆಲೆಯಾಗಿ ನಿಂದಿರ್ದ ತಾನಲ್ಲಿ ಮೊದಲೊರ್ವ |
ಮಲಯಾಳ ಬಿಲ್ಲವನು ||2||

ಕೋಂದ ಕನ್ನಾಯನೆಂಬವನು ತೆಂಗಿನಮರ |
ದಿಂದ ಕಳ್ಳನು ತೆಗೆದು ||
ಚಂದದೊಳಿರುತಿರೆ ಕಂಡಾತನನು ಬಳಿ |
ಕೆಂದರು ದೇವಿಯರು ||3||

ಬಳಿಗೆ ಬಂದಿಹೆವು ನೀರಡಿಕೆ ನಿವಾರಿಸೆ |
ಎಳನೀರನೀವುದೆನೆ ||
ತಿಳಿದು ದೇವಿಯರೆಂದು ನುತಿಸುತವರ ಭಕ್ತಿ |
ಯಲಿ ಕೊಟ್ಟನಾ ಕ್ಷಣದಿ ||4||

ಕೆತ್ತಿದರೆಂಟೆಳನೀರುಗಳೊಳಗೆ ತೂ |
ತಾಯ್ತೊಂದಕಸ್ಮಿಕದಿ ||
ಇತ್ತದನು ಭಗವತಿಗೆ ಸೇವಿಸಿದಳು |
ಉತ್ಸಾಹದಿಂದ ತಾನು ||5|| 127 ||

**ವಾರ್ಧಕ**
ದಿಟ್ಟಿಸುತಲದನಾಗ ಪಂಚದುರ್ಗೆಯರು ನೆರೆ |
ಸಿಟ್ಟಿನಿಂದುಸಿರಿದರು ಮಲೆಯಾಳ ಬಿಲ್ಲವನು |
ಕೊಟ್ಟಿರಲು ಭಿನ್ನವಾದೆಳನೀರ ತಿಳಿದದನು ಗ್ರಹಿಸದೀಪರಿ ಸೇವಿಸಿ ||
ಬಿಟ್ಟೆಯ ಸದಾಚಾರವನ್ನಿಂದು ನೀ ಜಾತಿ |
ಕೆಟ್ಟವಳು ನೀನಹುದುಯೆನಲಾಗ ಭಕ್ತಜನ |
ರಿಷ್ಟಾರ್ಥವಿತ್ತು ನಾನಿಲ್ಲಿ ನೆಲಸುವೆನೆಂದು ನೆಲೆನಿಂದಳಾ ಭಗವತಿ ||1|| 128 ||

**ಆರಭಿ – ತ್ರಿವುಡೆ (ಸೌರಾಷ್ಟ್ರ – ತ್ರಿವುಡೆ)**
ತೆರಳಿ ಮುಂದಕೆ ನೀವು ನಿಜ ಭ |
ಕ್ತರಿಗೊಲಿದು ನೆಲೆಯಾಗುವಲ್ಲಿಗೆ |
ಬರುವರುತ್ಸವಕೀ ಕುಲದವರು | ವರುಷಕೊಮ್ಮೆ ||1||

ಎಂದವರ ಕಳುಹಿಸಲು ಗುಳಿಗನು |
ವಂದಿಸುತ ದೇವಿಯಲಿ ನಾನೆಂ |
ದೆಂದಿಗೂ ಬಿಡೆ ನಿನ್ನ ಚರಣವ | ನೆಂದು ಛಲದಿ ||2||

ಪೇಳಲಾತನಿಗೊಲಿದು ನಿಲಿಸಲು |
ಮೇಲೆ ಪಂಚದುರ್ಗೆಯರು ಬಂದರು |
ಮೂಲಿಕಾಪುರಕಾಗಿ ತಮ್ಮಯ | ಲೀಲೆ ತೋರಿ ||3||

ಕಂಗೊಳಿಪ ಶಾಂಭವಿ ನದಿಯೊಳಗೆ |
ಲಿಂಗರೂಪದೊಳುದ್ಭವಿಸುತಲೆ |
ಮಂಗಳಾಂಗಿಯರಿರ್ದರೀಪರಿ | ವಿಂಗಡದಲಿ ||4|| 132 ||

**ಭಾಮಿನಿ**
ಸನುಮತದಿ ಭ್ರಮರಾಂಬಿಕೆ ಕಟೀ |
ಲಿನಲಿ ಕುಂಜಾರಿನಲಿ ಕಾತ್ಯಾ |
ಯಿನಿಯು ಬಳಿಕಾ ರಾಜರಾಜೇಶ್ವರಿಯು ಪೊಳಲಿಯೊಳು ||
ವಿನುತೆಯಾಗಿಹ ಅನ್ನಪೂರ್ಣೆಯು |
ಸನುಮತದಿ ಮುಡ್ಕೂರಿನೊಳಿರಲು |
ಜನಪದಕವರು ಧರ್ಮಪಾಲನ ಕಳುಹೆ ಸಂಚರಿಸೆ ||1|| 133 ||

**ಮೋಹನ - ಅಷ್ಟ (ಕೇದಾರಗೌಳ – ಅಷ್ಟ)**
ಬಪ್ಪನೆಂದೆನುವ ಮುಸಲ್ಮಾನ ವ್ಯಾಪಾರಿ |
ತಪ್ಪದೆ ಕುಲಧರ್ಮವ ||
ಒಪ್ಪುವ ಮೂಲಿಕಾಪುರವರದೊಳು ಮೆರೆ |
ದಿರ್ಪ ವೇಳ್ಯದಿ ಮುದದಿ ||1||

ಮಲೆಯಾಳವನ್ನಾಳಿದೈತಂದಲ್ಲಿರ್ಪನ |
ಬಳಸಿಕೊಂಡಿರುತಿರ್ದರು ||
ನಲವಿನಿಂದುಸ್ಮಾನ ಕೇತುಚ್ಚಲ್ ನೌಕರ |
ಅಲಸದೆ ನಿತ್ಯದಲಿ ||2||

ನಡೆದನು ವ್ಯಾಪಾರ ನಡೆಸಲು ಮಲ್ಪೆಗೆ |
ಒಡನೆ ನಾವೆಯನೇರುತ ||
ತಡೆಯದೆ ಶಾಂಭವಿ ನದಿಯಲಿ ಬರಲಾಗ |
ತಡೆದುದು ನಾವೆಯದು ||3||

ಕಂಡನು ಜಲದಲಿ ರಕ್ತವ ಬಲುಭಯ |
ಗೊಂಡನು ಕಳವಳಿಸಿ ||
ದಂಡಿಸದೆನ್ನ ರಕ್ಷಿಪುದೆಂದು ಹರಕೆ ಕೈ |
ಗೊಂಡನು ದೇವರಿಗೆ ||4||

ಎನ್ನಿಂದಾದಪರಾಧ ಮನ್ನಿಸಿ ಸಲಹುವ |
ದಿನ್ನು ಪ್ರಾಯಶ್ಚಿತ್ತವ ||
ನಿರ್ಣಯದಿಂ ಮಾಳ್ಪೆನೆಂದಿರೆ ದರ್ಶನ |
ವನ್ನಿತ್ತು ಶ್ರೀದುರ್ಗೆಯು ||5|| 138 ||

**ಸೌರಾಷ್ಟ್ರ - ತ್ರಿವುಡೆ**
ಕೊಟ್ಟಳಭಯವ ಬಪ್ಪ ಬ್ಯಾರಿಗೆ |
ಅಷ್ಟಪಾಣಿಯು ಬೆದರದಿರು ನೀ |
ಕಟ್ಟಿಸಲು ದೇಗುಲವನೆನಗತಿ | ಇಷ್ಟದಿಂದ ||1||

ಇನ್ನಿದಕೆ ಮೂಲಿಕೆಯ ಅರಸ ದು |
ಗಣ್ಣ ಸಾವಂತನ ಸಹಾಯಗ |
ಳನ್ನು ಪಡೆಯತ್ತೂರಿನುಡುಪನ | ನಿರ್ಣಯಿಸಲು ||2||

ನಡೆಸಿ ಪೂಜೆಯ ನಿತ್ಯದಲಿ ನೀ |
ಕೊಡುವದುಂಬಳಿಯನ್ನು ಕೀರ್ತಿಯ |
ಪಡೆಯೆ ಮತ್ತೊಡನಭಯವೀಯುತ | ಅಡರೆ ನಭವ ||3|| 141 ||

**ಕಂದ ಪದ್ಯ**

ಹೊಂದಿ ಮುದವನಾ ಬಪ್ಪನು |
ಬಂದನು ದುಗ್ಗಣ್ಣ ಸೇಮಿತನ ಬಳಿಗಾಗಂ ||
ಎಂದಪೆ ದೇವಿಯಭಯವಂ |
ಇಂದಾತನೊಳೆಂದು ಸಂತಸದೊಳಾದಿನದಿಂ ||1|| 142 ||

**ಕಾಂಭೋದಿ - ಝಂಪೆ**

ಮೂಲಿಕೆಯ ದುಗ್ಗಣ್ಣ ಸೇಮಂತ ಮೆರೆದಿರ್ದ |
ನೋಲಗದಿ ಸಚಿವಾದ್ಯರೊಡನೆ ||
ಆಲೋಚಿಸುತ್ತಿರಲು ತನ್ನ ಪ್ರಜೆ ಪರಿವಾರ |
ದೇಳಿಗೆಯನಂದು ಸಂತಸದಿ ||1||

ಬಂದನಲ್ಲಿಗೆ ಬಪ್ಪಬ್ಯಾರಿ ಕಾಣುತಲೆ ಮುದ |
ಹೊಂದಿ ಸೇಮಿತನು ಸತ್ಕರಿಸಿ ||
ಚಂದದಲಿ ನಡೆತಂದ ಹದನವೇನೆನೆ ನುಡಿದ |
ನಂದು ಶ್ರೀದೇವಿಯಭಯವನು ||2||

ಕರೆಸುತತ್ತೂರಿನುಡುಪನನು ತಾ ತವಕದಿಂ |
ವರಸುಲಗ್ನದಲಿ ದೇಗುಲವ ||
ನೆರೆ ಪ್ರತಿಷ್ಠಿಸಿ ಊರ ಜನರನ್ನು ನೆರಹಿ ನೀ |
ಪರಿಪೂರ್ಣವೆಸಗಬೇಕೆನಲು ||3||

ಬಪ್ಪಬ್ಯಾರಿಯು ಕಟ್ಟಿಸಿದ ಗರ್ಭಗುಡಿಯದಕೆ |
ಬಪ್ಪನಾಡೆಂದಾಯ್ತು ಪೆಸರು ||
ತಪ್ಪದಾ ಸೇಮಿತನು ಒಡಗೊಂಡು ಊರಿನೊಳ |
ಗಿಪ್ಪ ಪ್ರಮುಖರ ನೆರವಿನಿಂದ ||4|| 146 ||

**ಕೇದಾರಗೌಳ - ಅಷ್ಟ**

ಗೋಪುರಗಳ ಸಹಿತಲಿ ಕಟ್ಟಿಸುತ್ತ ದು |
ರ್ಗಾ ಪರಮೇಶ್ವರಿಯ ||
ತಾ ಪ್ರತಿಷ್ಠೆಯಗೈದು ಬ್ರಹ್ಮಕಲಶವ ನಾ |
ನಾ ಪರಿ ಸಂಭ್ರಮದಿ ||1||

ನೆರವೇರಿಸುತ್ತಲೆ ನಿತ್ಯಪೂಜೆಗೆ ಬಳಿ |
ಕಿರಿಸಿದರುಡುಪರನು ||
ಇರೆ ಸಂತಸದಿ ಧರ್ಮಪಾಲನಿತ್ತಲು ದೇವಿ |
ಯರನಗಲುತ ಜಗದಿ ||2||

ನಾಸ್ತಿಕರನು ಹಿಂಸಿಸುತ್ತಲೆ ಮನುಜರ |
ಆಸ್ತಿಕರನ್ನೆ ಮಾಡಿ||
ಸತ್ಯಧರ್ಮವ ನೆಲೆಗೊಳಿಸಿ ಶಾಂಭವಿ ನದಿ |
ಯೊತ್ತಿನೊಳೈತರಲು ||3||

ಪರಿಕಿಸಬೇಕೀತನನ್ನೆಂದು ಮನದೊಳು |
ಪರಮೇಶ್ವರಿಯು ತಿಳಿದು ||
ಧರಿಸುತ್ತ ಸುಂದರಾಂಗವ ನದಿ ತೀರದಿ |
ಬರಲು ಮುಸ್ಸಂಜೆಯೊಳು ||4|| 150 ||

**ಸಾಂಗತ್ಯ - ರೂಪಕ**

ನಾರಿಯನೀಕ್ಷಿಸುತಾ ಧರ್ಮಪಾಲನು |
ಯಾರು ನೀ ಮುಸ್ಸಂಜೆಯೊಳಗೆ ||
ಈ ರೀತಿ ತಿರುಗುವುದುಚಿತವೆ ಯೌವನ |
ವೇರಿ ರಂಜಿಸುವ ಮಾನಿನಿಗೆ ||1||

ಎನಲೊಡನೆಂದಳು ಜನಪದದೊಳಗುಳ್ಳ |
ಜನರು ನೀ ಸಹಿತೆನ್ನ ಸುತರು ||
ಮನದಿ ಭೀತಿಯದಿಲ್ಲವೆನಲು ಕೇಳುತ ಖಾತಿ |
ಯನು ತಳೆದೆಂದನಾಕೆಯೊಳು ||2||

ಎಲೆಗೆ ನೀತಿಯನು ನಾ ತಿಳುಹಲು ಗರ್ವದಿ |
ಗಳಹುವೆ ಮನಕೆ ಬಂದಂತೆ ||
ಸಲುಗೆಯೆಯೆನ್ನಲಿ ಇಳುಹುವೆ ಮದವನು |
ತಳುವದೆ ಈ ಘಳಿಗೆಯಲಿ ||3||

ಮದವಿಳುಹುವ ನಿನ್ನಧಟನು ಕಾಂಬೆನು |
ಇದಿರಾಗು ಸಮರಕೆಂದೆನುತ ||
ವದಗಿನಿಂದಲಿ ರಣಕಂಜದೆ ದೇವಿ ಮೆ |
ಚ್ಚಿದೆ ಪರಾಕ್ರಮಕೆ ನಾನಿಂದು ||4||

ನುಡಿದರಿಷ್ಟಾರ್ಥವ ಕೊಡುವೆನೆಂದರೆ ಕೇಳಿ |
ಒಡನೆಂದನಾ ಧರ್ಮಪಾಲ ||
ತಡಮಾಡದೀವೆ ನೀ ಬೇಡಿದುದನ್ನಿದು |
ದೃಢವೈಸೆ ಪುಸಿಯ ಮಾತಲ್ಲ ||5||

ದೇಗುಲ ರಕ್ಷಕನಾಗಿ ನೀನಿಹುದೆನೆ |
ಆಗ ದೇವಿಯ ನಿಜವರಿತು ||
ಬಾಗಿ ಶಿರವ ಸಂಸ್ತುತಿಸಿದ ಸಲಹ ಬೇ |
ಕೀಗ ನೀ ಕರುಣವನಿರಿಸಿ ||6||

ತಕ್ಷಣ ಅಭಯವನಿತ್ತಳು ದೇಗುಲ |
ರಕ್ಷಕನಾಗಿಹುದೆನುತ ||
ನೀ ಕ್ಷೇತ್ರಪಾಲನೆಂದೆನಿಸುಯೆಂದಾ ಜಗ |
ದ್ರಕ್ಷಕಿ ಕೊಟ್ಟಳಭಯವ ||7|| 157 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಪದವೀಧರ ಯಕ್ಷಗಾನ ಸಮಿತಿ, ಮುಂಬೈ

**ಪ್ರಸಂಗ ಪ್ರತಿ ಆಧಾರ:** ಪದವೀಧರ ಯಕ್ಷಗಾನ ಸಮಿತಿ, ಮುಂಬೈ ಪ್ರಕಟಿತ ಅಗರಿಯವರ ಯಕ್ಷಗಾನ ಪ್ರಸಂಗಗಳು ಸಂಪುಟ

**ಪ್ರಸಂಗ ಪ್ರತಿ ಕೊಟ್ಟವರು:** ಲ. ನಾ. ಭಟ್ಟ

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಲ. ನಾ. ಭಟ್ಟ

**ಅಂತರಜಾಲ ಪ್ರತಿ ಬರವಣಿಗೆ:** ಲ. ನಾ. ಭಟ್ಟ

**ಅಂತರಜಾಲ ಪ್ರತಿ ವಿನ್ಯಾಸ:** ದಿನೇಶ ಉಪ್ಪೂರ, ಅಜಿತ್ ಕಾರಂತ್, ಅಶ್ವಿನಿ ಹೊದಲ

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ಶಿವಕುಮಾರ ಬಿ. ಎ. ಅಳಗೋಡು, ನಟರಾಜ ಉಪಾಧ್ಯ, ಅಶ್ವಿನಿ ಹೊದಲ